ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರಿನಲ್ಲಿ ಪ್ರಾಥಮಿಕ ಶಾಲೆಯನ್ನು ತೆರೆಯುವ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಕಡ್ಡಾಯ ಪ್ರಾಥಮಿಕ ಶಿಕ್ಷಣದ ನಿಯಮಾವಳಿ ಪ್ರಕಾರ ಅವಶ್ಯಕವಿದ್ದಲ್ಲಿ ಸರಕಾರದ ಪ್ರಾಥಮಿಕ ಶಾಲೆಯನ್ನು ತೆರೆಯಲಾಗುತ್ತದೆ ಎಂದು ಹೇಳಿದ್ದಾರೆ. ೧೯೮೦-೮೧ನೇ ಸಾಲಿನಲ್ಲಿ ಚಿಕ್ಕಮಗಳೂರಿನ ಕೇಂದ್ರ ಸ್ಥಳದಲ್ಲಿ ಎಷ್ಟು ಶಾಲೆಗಳಿಗೆ ಬೇಡಿಕೆ ಇತ್ತು ಮತ್ತು ಎಷ್ಟು ಶಾಲೆಗಳನ್ನು ಪೂರೈಸಲಾಗಿದೆಯೆಂಬುದನ್ನು ಹೇಳುತ್ತಾರೆಯೇ ?

† ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಚಿಕ್ಕಮಗಳೂರು ಟೌನಿನಲ್ಲಿ ಈಗಾಗಲೇ ೩೧ ಶಾಲೆಗಳು ಅಸ್ತಿತ್ವದಲ್ಲಿವೆ. ೨೨ ಸರ್ಕಾರೀ ಶಾಲೆಗಳಿದ್ದು ೯ ಏಡೆಡ್ ಶಾಲೆಗಳಿವೆ. ಈಗಿರುವ ಅಂಕಿಅಂಶದ ಪ್ರಕಾರ ಸಾಕಷ್ಟು ಶಾಲೆಗಳನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಏನಾದರೂ ಎಲ್ಲಾದರೂ ಶಾಲೆ ಬೇಕು ಎಂಬುದನ್ನು ಸರ್ಕಾರದ ಗಮನಕ್ಕೆ ತಂದರೆ ಖಂಡಿತ ಅಲ್ಲಿ ಶಾಲೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

Levy of water Tax in Hassan District

665 SRI HANUMEGOWDA (Hassan).—Will the Minister for Revenue be pleased to state—

(a) the collection and the balance due in respect of water rates payable from various taluks in Hassan district for the last 3 years;

(b) whether it has come to the notice of Government that the revenue authorities are pressing for the payment of water rates during the years of drought even though there was no water in the tanks and failure of crops;

(c) the action to be taken by farmer to get exemption from payment of water rates in the year in which crops failed;

(d) the number of applications of farmers pending in the revenue departments of various taluks requesting for the exemption from the payment of tax ?

SRI MALLIKARJUNA M. KHARGE (Minister for Revenue).—

(a) Particulars are given in the statement laid on the Table of the House*

(b) No.

(c) No water tax will be levied to the achkat area in the year in which there was no rain. In case of levy of water tax, within 30 days after receipt of the demand notice, appeals may be filed before the Assistant Commissioner and their grievances may be intimated to him.

(d) Only one case in Hassan taluk.

Copy placed in the Karnataka Legislature Library *Vide* No. 15 dated. 12-3-1981.

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡಿ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿದೆ. ಅಲ್ಲಿ ಸಾಕಷ್ಟು ನೀರು ಇರುತ್ತದೆ. ಆದರಿಂದ ಬೆಳೆಗೆ ನೀರು ಕೊಡುತ್ತಾರೆ. ಅಂಥ ಭಾಗಗಳಲ್ಲಿ ವಾಟರ್ ರೇಟ್ ಹಾಕುವುದರಲ್ಲಿ ಅರ್ಥವಿದೆ. ಆದರೆ ಹಳ್ಳಿಗಳ ಕಡೆ ಸಣ್ಣ ಸಣ್ಣ ಕೆರೆಗಳಿದ್ದು ವರ್ಷದಲ್ಲಿ ಹತ್ತು ಸಾರಿ ತುಂಬಿದರೂ ಅಲ್ಲಿ ಬೆಳೆ ಬರುವುದಿಲ್ಲ. ಇಂಥ ಕಡೆ ಕೂಡ ಒಂದೇ ತತ್ವದ ಮೇಲೆ ವಾಟರ್ ರೇಟ್ ಹಾಕಿ ಇದರಿಂದ ಜನರಿಗೆ ತೊಂದರೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ?

† ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀರು ಇಲ್ಲದೇ ಇರುವ ಕೆರೆಗಳಿದ್ದರೆ ಆ ಬಗ್ಗೆ ಮನವಿ ಸಲ್ಲಿಸಿದ್ದರೆ ಸಂಬಂಧಪಟ್ಟ ತಹಸೀಲ್ದಾರರು ಮತ್ತು ಅಸಿಸ್ಟೆಂಟ್ ಎಗ್ಸಿಕ್ಯುಟೀವ್ ಇಂಜಿನಿಯರ್ ಅವರು ಹೋಗಿ ನೋಡಿ ವರದಿ ಒಪ್ಪಿಸಿದರೆ ಅಂಥ ಕಡೆ ವಾಟರ್ ರೇಟ್ ಪನ್ನಾ ಮಾಡುವುದಕ್ಕೆ ಅವಕಾಶವಿದೆ. ಈಗಾಗಲೇ ಹಾಸನ ತಾಲ್ಲೂಕಿನಿಂದ ಈ ಬಗ್ಗೆ ಮನವಿ ಬಂದಿದೆ. ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತಿದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಅಧ್ಯಕ್ಷರೇ, ನನ್ನ ಪ್ರಶ್ನೆ ಹೀಗಿದೆ. ಕೋಟ್ಯಾಂತರ ರೂಪಾಯಿ ದುಡ್ಡು ಖರ್ಚು ಮಾಡಿ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟುತ್ತಾರೆ. ಅಣೆಕಟ್ಟುಗಳನ್ನು ಕಟ್ಟಿ ಅದರಿಂದ ಬೆಳೆಗೆ ನೀರು ಕೊಡುತ್ತಾರೆ. ಅಂಥ ಕಡೆಗಳಲ್ಲಿ ವಾಟರ್ ರೇಟನ್ನು ಯಾವ ತತ್ವದ ಮೇಲೆ ಹಾಕುತ್ತಾರೋ ಅದೇ ತತ್ವದ ಮೇಲೆ ಇಲ್ಲೂ ಹಾಕಂತ್ತಿರುವುದು ಸರಿಯೇ ಎಂದು ಕೆಲವು ಸಣ್ಣ ಸಣ್ಣ ಕೆರೆಕಟ್ಟೆಗಳಿದ್ದು ಅಲ್ಲಿ ವರ್ಷದಲ್ಲಿ ೧೦ ಸಾರಿ ನೀರು ತುಂಬಿದರೂ ಅದರಿಂದ ಬೆಳೆಗೆ ಅನುಕೂಲವಾಗುವುದಿಲ್ಲ, ಬೆಳೆ ಬರುವುದಿಲ್ಲ. ಅಂಥ ಕಡೆಗಳಲ್ಲೂ ಅಣೆಕಟ್ಟಿನಿಂದ ನೀರು ಕೊಟ್ಟರೆ ಹಾಕುವಂತೆ ವಾಟರ್ ರೇಟನ್ನು ಹಾಕಿದ್ದಾರೆ. ಬೆಳೆ ಕಳೆದುಕೊಂಡು ತೊಂದರೆಯಲ್ಲಿರತಕ್ಕ ಜನರಿಗೆ ಇದರಿಂದ ತುಂಬಾ ತೊಂದರೆಯಾಗಿದೆ. ಇಂಥ ಸಂದರ್ಭದಲ್ಲಿ ವಿಲೇಜ್ ಅಕೌಂಟೆಂಟರ ಕಾಟ ಪ್ರಾರಂಭವಾಗಿ ರೈತರು ತುಂಬಾ ಕಷ್ಟದಲ್ಲಿದ್ದಾರೆ. ಮಾನ್ಯ ಮಂತ್ರಿಗಳು ನೀರು ಸಿಗದಿದ್ದರೆ ಅರ್ಜಿ ಕೊಡಬೇಕು ನಂತರ ತಹಸೀಲ್ದಾರರು ಮತ್ತು ಅಸಿಸ್ಟೆಂಟ್ ಎಗ್ಸಿಕ್ಯುಟೀವ್ ಇಂಜಿನಿಯರ್‌ರವರು ಪರಿಶೀಲನೆ ಮಾಡುತ್ತಾರೆ ಎಂದು ಹೇಳುತ್ತಾರೆ. ಇವರಿಬ್ಬರನ್ನು ಒಂದು ಕಡೆ ಸೇರಿಸುವುದು ತುಂಬಾ ಕಷ್ಟದ ಕೆಲಸ. ನಮ್ಮ ಹಾಸನ ತಾಲ್ಲೂಕಿನಲ್ಲಿ ೭೦೦-೮೦೦ ಕೆರೆಗಳಿವೆ. ಈ ಅಧಿಕಾರಿಗಳು ೮-೧೦ ದಿವಸಗಳಲ್ಲಿ ೭೦೦-೮೦೦ ಕೆರೆಗಳನ್ನು ಇನ್‌ಸ್ಪೆಕ್ಟ್ ಮಾಡುವುದಕ್ಕೆ ಸಾಧ್ಯವೇ ?

ಅಧ್ಯಕ್ಷರು.—ತಮಗೆ ಏನು ಉತ್ತರ ಬೇಕು ಎಂಬುದನ್ನು ಕೇಳಿ. ನೀವು ಸಂಯ್ಮನೆ ಉದ್ವೇಗದಿಂದ ಭಾಷಣ ಮಾಡಿದರೆ ನಿಮ್ಮ ಉದ್ದೇಶವೇ ಹೊರಟು ಹೋಗುತ್ತದೆ.

ಶ್ರೀ ಕೆ.ಎಚ್. ಹನುಮೇಗೌಡ.—ನಾನು ಹೇಳುತ್ತಿರುವುದು, ದೊಡ್ಡ ದೊಡ್ಡ ಅಣೆಕಟ್ಟುಗಳಿಂದ ನೀರನ್ನು ಪಡೆಯುವ ರೈತರಿಗೆ ಯಾವ ತತ್ವದ ಆಧಾರದ ಮೇಲೆ ವಾಟರ್ ರೇಟನ್ನು ಹಾಕಂತ್ತಾರೆಯೋ ಅದೇ ತತ್ವದ ಮೇಲೆ ಬಡ ರೈತರಿಗೆ ಹಾಕಿದರೆ ತೊಂದರೆಯಾಗುತ್ತದೆ. ದೊಡ್ಡ ದೊಡ್ಡ ಅಣೆಕಟ್ಟುಗಳಿಂದ ನೀರನ್ನು ಪಡೆಯತಕ್ಕವರು ದೊಡ್ಡ ದೊಡ್ಡ ಶ್ರೀಮಂತರಾಗಿರುತ್ತಾರೆ. ಆದರೆ ಅವರಿಗೆ ಹಾಕುವಂತೆಯೇ ೨ ಗುಂಟೆ, ೩ಗುಂಟೆ, ೫ ಗುಂಟೆ ಇರತಕ್ಕ ಬಡರೈತರಿಗೂ ವಾಟರ್ ರೇಟ್ ಹಾಕಿದರೆ ಬಡ ರೈತರಿಗೆ ಹಿಂಸೆಯಾಗುವುದಿಲ್ಲವೇ ? ಇದು ನಿಮ್ಮ ಗಮನಕ್ಕೆ ಬಂದಿಲ್ಲವೇ ? ಬಂದಿದ್ದರೆ ಇದನ್ನು ತಪ್ಪಿಸುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಎಲ್ಲಿ ನೀರಿದೆ ಅಂಥ ಕಡೆ ನಾವು ವಾಟರ್ ರೇಟನ್ನು ವಸೂಲು ಮಾಡುತ್ತೇವೆ. ಎಲ್ಲಿ ನೀರು ಇಲ್ಲ ಅಂಥ ಕಡೆಯಿಂದ ರೆಪ್ರಸೆಂಟೇಷನ್ ಬಂದರೆ ಮನ್ನಾ ಮಾಡುತ್ತೇವೆ. ಮಾನ್ಯ ಸದಸ್ಯರ ಗಮನಕ್ಕೆ ಎಲ್ಲಾದರೂ ಪನ್ನಾ ಮಾಡಿಲ್ಲ ಎಂಬುದು ಬಂದಿದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ಪರಿಶೀಲಿಸುತ್ತೇವೆ.

ಶ್ರೀ ವಿ. ಮಂಸಿಯಪ್ಪ.—ಮಾನ್ಯ ಅಧ್ಯಕ್ಷರೇ, ಸಣ್ಣ ಕೆರೆಗಳ ಹಿಡುವಳಿದಾರರು ಕೆರೆಗಳಿಗೆ ನೀರು ಬಂದಿಲ್ಲ ಮತ್ತು ಬೆಳೆಯಾಗಿಲ್ಲ ಆದುದರಿಂದ, ಕಂದಾಯ ಪಜಾ ಮಾಡಬೇಕೆಂದು ಸಂಬಂಧಪಟ್ಟ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಶಾಸನದ ಪ್ರಕಾರ ಅರ್ಜಿಯನ್ನು ಈಗಾಗಲೇ ಕೊಟ್ಟಿದ್ದಾರೆ. ಆದರೆ ಅಸಿಸ್ಟೆಂಟ್ ಕಮಿಷನರ್ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಅವರುಗಳಿಂದ ಸ್ಥಳ ಪರಿಶೀಲನೆ ಮಾಡಿಸಿ

ಮಾಡದೆ, ಜವಾಬ್ದಾರಿಯನ್ನು ತಮ್ಮ ತಲೆಯ ಮೇಲೆ ಹೊತ್ತುಕೊಳ್ಳುವುದಕ್ಕೆ ಸಿದ್ಧರಾಗದೆ, ಕಂದಾಯ ವಸೂಲಿ ಪ್ರಮಾಣ ಕಡಮೆಯಾದರೆ ನಮಗೆಲ್ಲಿ ಕೆಟ್ಟ ಹೆಸರು ಬರುತ್ತದೋ ಎನ್ನುವ ದೃಷ್ಟಿಯಿಂದ ಸುಮ್ಮನಿದ್ದು ರೈತರಿಗೆ ಪರಿಹಾರ ಕೊಡದೆ ಇರುವುದರಿಂದಾಗಿ ಅನೇಕ ವರ್ಷಗಳಿಂದ ಈ ವಿಚಾರ ಇತ್ಯರ್ಥವಾಗದೆ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ, ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಹಾಸನ ಜಿಲ್ಲೆಗೆ ಸಂಬಂಧಿಸಿದ ಪ್ರಶ್ನೆಯನ್ನು ನಾವಿಲ್ಲಿ ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ಮಸಿಯಪ್ಪನವರು ಹೇಳಿದ ವಿಚಾರ ಇದರಲ್ಲಿ ಉದ್ಭವಿಸುವುದಿಲ್ಲ. ಅಲ್ಲದೆ, ನಾನೀಗಾಗಲೇ ಹೇಳಿದ್ದೇನೆ.....

MR. SPEAKER.—In respect of small tanks, where water will not be available even for one crop, the situation is same throughout the State. From that angle, the hon. Members are putting the questions.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಂತಹದನ್ನು ನನ್ನ ಗಮನಕ್ಕೆ ತಂದರೆ ಮತ್ತು ಅಂತ ಹವರು ಯಾರಾದರೂ ಇದ್ದರೆ, ನಾನು ಕಾನೂನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಸರಿಯಾಗಿ ಬೆಳೆ ಬರದೆ ಹೋದರೆ ಪರಿಹಾರ ಕೊಡಬೇಕೆಂದು ಕಾನೂನು ಮಾಡಲಾಗಿದೆ. ಆದರೆ, ಆ ಪರಿಹಾರ ರೈತರಿಗೆ ದೊರೆಯುತ್ತಿಲ್ಲ. ಕಾನೂನು ಪ್ರಕಾರ ಅಸಿಸ್ಟೆಂಟ್ ಕಮಿಷನರ್ ಮತ್ತು ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಎಂಜಿನಿಯರ್ ಅವರು ಇಬ್ಬರೂ ಒಟ್ಟಿಗೆ ಹೋಗಿ ಸ್ಥಳವನ್ನು ಅಜಮಾಯಿಷಿ ಮಾಡಬೇಕು, ಬೆಳೆ ಹೋಗಿದೆಯೇ, ನೀರು ಬಂದಿಲ್ಲವೇ ಎಂಬುದನ್ನು ಅವರು ನೋಡಬೇಕು. ನಮ್ಮ ಭಾಗದಲ್ಲಿ ಸಾವಿರಾರು ಕೆರೆಗಳಿವೆ. ಅವೆಲ್ಲವನ್ನೂ ಈ ಇಬ್ಬರು ಅಧಿಕಾರಿಗಳು ನೋಡುವುದಕ್ಕೆ ಸಾಧ್ಯವಿಲ್ಲ. ಇದರಿಂದಾಗಿ, ನಾವು ಸರ್ಕಾರದ ಗಮನಕ್ಕೆ ಇದನ್ನು ನೀರಿನ ತೆರಿಗೆ ವಿಧಿಸಿದಂದಿನಿಂದ ತರುತ್ತಿದ್ದರೂ ಕಾನೂನು ಪ್ರಕಾರ ಪರಿಹಾರ ಮಾತ್ರ ರೈತರಿಗೆ ದೊರೆಯುತ್ತಿಲ್ಲ. ಹಿಂದೆ ನೀರಿನ ತೆರಿಗೆಯನ್ನು ಫ್ಲಾಟ್ ರೇಟ್ ಆಗಿ ವಸೂಲು ಮಾಡುತ್ತಿದ್ದರು. ಆಗ ರೈತರು ಉಪವಾಸವಿದ್ದರೂ ನೀರಿನ ತೆರಿಗೆಯನ್ನು ಸರಿಯಾಗಿ ಕೊಡುತ್ತಿದ್ದರು. ಆದರೆ, ಈಗ ಗ್ರಾಮ ಲೆಕ್ಕಿಗರ ಕಾಟ ಜಾಸ್ತಿಯಾಗಿದೆ. ಅವರಿಗೆ ದುಡ್ಡು ಕೊಟ್ಟವರಿಗೆ ಕಡಮೆ ತೆರಿಗೆ ಗೊತ್ತು ಮಾಡುತ್ತಾರೆ, ಕೊಡದವನಿಗೆ ಜಾಸ್ತಿ ತೆರಿಗೆ ಗೊತ್ತು ಮಾಡುತ್ತಾರೆ. ಈ ಸಮಸ್ಯೆಯನ್ನು ನಾವು ಮಾನವೀಯ ದೃಷ್ಟಿಯಿಂದ ನೋಡಬೇಕಾಗಿದೆ. ಮಾತೆತ್ತಿದರೆ ನಾವು ಬಡವರ ಹೆಸರನ್ನು ಹೇಳುತ್ತಿರುತ್ತೇವೆ. ಸಣ್ಣ ಸಣ್ಣ ಕೆರೆಗಳ ಹಿಂದೆ ಶ್ರೀಮಂತರ ಜಮೀನು ಇರುವುದಿಲ್ಲ. ಅಲ್ಲಿರುವುದೆಲ್ಲ ಬಡವರ ಜಮೀನು. ಆದುದರಿಂದ. ಈಗ ನೀರಿನ ತೆರಿಗೆ ಹಾಕುವಲ್ಲಿ ಅನುಸರಿಸುತ್ತಿರುವ ನೀತಿಯನ್ನು ತೆಗೆದುಹಾಕಿ ಫ್ಲಾಟ್ ರೇಟ್ ಎಂದು ೧೫ ಅಥವಾ ೨೦ ಅಥವಾ ೩೦ ರೂಪಾಯಿಗಳನ್ನು ನಿಗದಿ ಮಾಡಿ, ಶಾಶ್ವತವಾಗಿ ಬಡವರನ್ನು ಗ್ರಾಮಲೆಕ್ಕಿಗರ ಶಿಕ್ಷೆಯಿಂದ ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರಾದ ಶ್ರೀ ಹನುಮೇಗೌಡರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಹನುಮೇಗೌಡರು ಹೇಳಿದ ಹಾಗೆ ದೊಡ್ಡ ಜಲಾಶಯದ ಹಿಡುವಳಿದಾರರಿಗೂ ಮತ್ತು ಸಣ್ಣ ಸಣ್ಣ ಕೆರೆಗಳ ಹಿಡುವಳಿದಾರರಿಗೂ ನೀರಿನ ತೆರಿಗೆ ಹಾಕುವಲ್ಲಿ ಒಂದೇ ಮಾಪಕವನ್ನು ಇಟ್ಟುಕೊಳ್ಳಬಾರದು. ಸಣ್ಣ ಸಣ್ಣ ಕೆರೆಗಳ ಹಿಡುವಳಿದಾರರಿಗೆ ನೀರಿನ ತೆರಿಗೆ ಹಾಕುವಲ್ಲಿ ಈಗ ಅನುಸರಿಸುತ್ತಿರುವ ವಿಧಾನವನ್ನು ಬಿಟ್ಟು ಫ್ಲಾಟ್ ರೇಟ್ ನಿಗದಿ ಮಾಡುವುದನ್ನು ಪರಿಶೀಲಿಸುವುದಾಗಿ ಮಾನ್ಯ ಸಚಿವರು ಹೇಳಿದ್ದಾರೆ. ಅವರು ಹಾಗೆ ಹೇಳುವುದರ ಬದಲು ಒಂದು ವಿಚಿತವಾದ ಆಶ್ವಾಸನೆಯನ್ನು ಕೊಡುವುದು ಒಳ್ಳೆಯದೆಂದೂ ನನ್ನ ಅಭಿಪ್ರಾಯ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಪರಿಶೀಲನೆ ಮಾಡದೆ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕಾಗಿಯೇ ಪರಿಶೀಲನೆ ಮಾಡುತ್ತೇನೆಂದು ಹೇಳಿದೆ. If it is beneficial to all.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಈ ಸಮಸ್ಯೆ ನೀರಾವರಿಗೆ ಸಂಬಂಧಿಸಿದ ಕಾನೂನು ಬಂದಂದಿನಿಂದ ಪ್ರಾರಂಭವಾಗಿದೆ. ಆವತ್ತಿನಿಂದ ಇವತ್ತಿನವರೆಗೂ ಸರ್ಕಾರದವರು ಇದೇ ರೀತಿಯಾದ ಗಿಳಿ ಪಾಠದ ಉತ್ತರವನ್ನು ಈ ಸದನದಲ್ಲಿ ಮತ್ತು ಹೊರಗಡೆ ಕೊಡುತ್ತಾ ಬಂದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವೂ ಕೂಡ...

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದಕ್ಕಾಗಿಯೇ ನಾನು ತಮ್ಮ ಗಮನ ಸೆಳೆಯುತ್ತಿರುವುದು. They are considered as Irrigation Works. This has hard hit, particularly...

MR. SPEAKER.—If the water is let out. That provision also there.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀರು ಇರಲಿ, ಇಲ್ಲದೇ ಇರಲಿ. ತೂಬು ಮತ್ತು ಏರಿ ಇದ್ದದ್ದೆಲ್ಲ ಕೆರೆ. ಅಲ್ಲಿ ಏನಾಗಿದೆ? ಹಿಂದೆ ಕನ್ಸಾಲಿಡೇಟೆಡ್ ಭೂ ಕಂದಾಯವಿತ್ತು. ಆದರ ಬದಲು ನೀರಿನ ತೆರಿಗೆಯನ್ನು ಹಾಕಿದಂದಿನಿಂದ ಈ ಸಮಸ್ಯೆ ಬಗೆಹರಿದಿಲ್ಲ ಮತ್ತು ಹಣವನ್ನು ವಸೂಲು ಮಾಡುವುದಕ್ಕಾಗಿಲ್ಲ. Most of the tanks are in the nature of diversion works. They are not capacity tanks. They are not irrigation works. ಆದುದರಿಂದ, ನೀರಿನ ತೆರಿಗೆ ವಸೂಲಾತಿಗೆ ತಡೆ ಆಜ್ಞೆ ಕೊಟ್ಟುಕೊಂಡು ಬರಲಾಗಿದೆ. ಇಂತಹ ಸಣ್ಣ ಕೆರೆಗಳ ಹಿಡುವಳಿದಾರರಿಗೆ ಈಗಿರುವ ಬದಲಾಗಿ ನೀರಿನ ತೆರಿಗೆಯನ್ನು ಒಂದು ಕನ್ಸಾಲಿಡೇಟೆಡ್ ಭೂ ಕಂದಾಯವನ್ನು ನಿಗದಿ ಮಾಡುವುದು ಅತ್ಯಗತ್ಯವಿದೆ.ನಾನು ಒಂದು ವಿಚಾರವನ್ನು ಇಲ್ಲಿ ಹೇಳುವುದಾದರೆ, ಹಿಂದೆ ಮಾನ್ಯ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಗಳಾಗಿದ್ದಾಗ, ಅವರಿಗೆ ಇಂತಹ ಒಂದು ಕೆರೆಯನ್ನು ತೋರಿಸಿದಾಗ, ನೀರಾವರಿಗೆ ಸಂಬಂಧಿಸಿದ ಕಾನೂನನ್ನು ಬದಲಾವಣೆ ಮಾಡಬೇಕೆಂದು ತೀರ್ಮಾನಕ್ಕೆ ಬಂದಿದ್ದರು. ಆದರೆ, ಅದು ಕಾರ್ಯಗತವಾಗಲಿಲ್ಲ. ಈಗಲೂ ಅದನ್ನು ಸರ್ಕಾರ ಮಾಡಬಹುದು. ಆದುದರಿಂದ, ಈ ಬಗ್ಗೆ ಒಂದು ಸಭೆ ಕರೆದರೆ ನಾವು ಅಭಿಪ್ರಾಯಗಳನ್ನು ತಿಳಿಸುವೆವು. ದಯವಿಟ್ಟು ಸಭೆ ಕರೆಯುವಿರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಹನುಮೇಗೌಡರು ಒಂದು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸಿದ ಮೇಲೆ ನಿರ್ಣಯ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಸಣ್ಣ ಕೆರೆಗಳ ಹಿಡುವಳಿದಾರರಿಗೆ ವಿಧಿಸಿರುವ ನೀರಿನ ತೆರಿಗೆ ಬಗ್ಗೆ ರಿಟ್ ರಿಂದಲೂ ಚಳವಳಿಯಾಗಿದೆ. ಈ ಸದನದಲ್ಲೂ ಇದರ ಬಗ್ಗೆ ಅನೇಕ ಸಲ ಚರ್ಚೆಯಾಗಿದೆ. ಈಗಿರುವ ವಿಧಾನವನ್ನು ಬದಲಾಯಿಸಬೇಕೆಂದು ನನ್ನ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಮಿತಿಯೂ ಕೂಡ ಶಿಫಾರಸ್ಸು ಮಾಡಿದೆ ಮತ್ತು ಇದು ಎಲ್ಲರೂ ಒಪ್ಪಿದಂಥ ವಿಚಾರವಾಗಿದೆ, ಈ ಬಗ್ಗೆ ಬೇರೆ ಬೇರೆ ವರದಿಗಳೂ ಕೂಡ ಸರ್ಕಾರದ ಮುಂದೆ ಇವೆ. ಈ ಬಗ್ಗೆ ನರಗುಂದ ಮತ್ತು ನವಲಗುಂದ ಚಳವಳಿ ಪ್ರಾರಂಭವಾಗುವ ಮೊದಲು ಹಿಂದೆ ನಡೆದ ಒಂದು ಚಳವಳಿ ಸಂದರ್ಭದಲ್ಲಿ ಆಗ ಇದ್ದ ಕಂದಾಯ ಮಂತ್ರಿಗಳು ಒಂದು ಆಶ್ವಾಸನೆ ಕೊಟ್ಟಿದ್ದರು. ಶ್ರೀ ಸ್ವಾಮಿನಾಥನ್ ಮತ್ತು ಶ್ರೀ ಆನಂದಕೃಷ್ಣ ಅವರುಗಳು ಕಂದಾಯ ಇಲಾಖೆಯ ಕಮಿಷನರ್‌ಗಳು ಆಗಿದ್ದಾಗ ಕೊಡಲಾದ ವರದಿಗಳೂ ಕೂಡ ಸರ್ಕಾರದ ಮುಂದಿದೆ. ಜೊತೆಗೆ, ಕಳೆದ ಅಧಿವೇಶನದಲ್ಲಿ ಈ ಸಮಸ್ಯೆಯನ್ನು ನಾನು ಪ್ರಸ್ತಾಪ ಮಾಡಿದ್ದೆನು. ಇದು ಎಲ್ಲರೂ ಕೂಡಿ ಒಪ್ಪಿಕೊಂಡ ವಿಚಾರವಾಗಿದೆ. ಮೊನ್ನೆ ಆಜ್ಞೆ ಹೊರಡಿಸುವಾಗ ಫ್ಲಾಟ್ ರೇಟ್ ನಿಗದಿ ಮಾಡಿದ್ದಾರೆ. ಇದೇ ಚಳವಳಿಗೆ ಮೂಲಕಾರಣ. ಈಗಾಗಲೇ ಚಳವಳಿ ಮಾಡುವುದಕ್ಕೆ ರೈತರು ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದಾರೆ. ಆದುದರಿಂದ, ಸರ್ಕಾರದ ಮುಂದಿರುವ ಹಲವಾರು ವರದಿಗಳನ್ನು ಪರಿಶೀಲಿಸಿ ಆದಷ್ಟು ಬೇಗ ಒಂದು ನಿರ್ಣಯವನ್ನು ತೆಗೆದುಕೊಳ್ಳುವಿರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಉತ್ತರವನ್ನು ತಯಾರು ಮಾಡಲಾಗಿದೆ. ಆದರೂ, ಈ ಪ್ರಶ್ನೆಯನ್ನು ಪರಿಶೀಲಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪರಿಶೀಲಿಸುವ ಪ್ರಶ್ನೆಯಲ್ಲ. ಇದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಪ್ರಶ್ನೆ ಹಾಸನ ಜಿಲ್ಲೆಗೆ ಸಂಬಂಧಪಟ್ಟಿದ್ದರೂ ಸಮಸ್ಯೆ ಮಾತ್ರ ರಾಜ್ಯದ

ಎಲ್ಲ ಭಾಗದಲ್ಲೂ ಇದೆ. ಆದುದರಿಂದ, ಇದನ್ನು ಮತ್ತೆ ಪರಿಶೀಲಿಸುವ ಪ್ರಶ್ನೆ ಇಲ್ಲ. ಹಿಂದಿನ ಕಂದಾಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ.

ಅಧ್ಯಕ್ಷರು.—ತಾವು ತಡವಾಗಿ ಬಂದಿರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ತಡವಾಗಿ ಬಂದಿದ್ದೇನೆ. ಅವರೂ ಸಹ ತಡವಾಗಿ ಮಂತ್ರಿಗಳಾಗಿದ್ದಾರೆ. ಮಾನ್ಯ ಸಚಿವರು ಉತ್ತರ ಕೊಡುವಾಗ, ಹಿಂದಿನ ಕಂದಾಯ ಸಚಿವರು ನೀಡಿದ್ದ ಆಶ್ವಾಸನೆಯನ್ನೂ ಮತ್ತು ಕಂದಾಯ ಇಲಾಖೆಯ ಕಾರ್ಯದರ್ಶಿಯವರು ನೀಡಿದ್ದ ವರದಿಯನ್ನೂ ನೋಡಿಕೊಂಡು ಉತ್ತರ ಕೊಡಬೇಕಲ್ಲವೆ? ರೈತರ ಚಳವಳಿ ಸಂಬಂಧದಲ್ಲಿ ರಚಿಸಲಾಗಿದ್ದ ನಮ್ಮ ಸಮಿತಿಯೂ ಕೂಡ ಒಂದು ವರದಿ ಕೊಟ್ಟಿದೆ. ಇದು ರೈತರ ಮುಖಂಡರೊಂದಿಗೆ ಚರ್ಚೆ ಮಾಡಿ ಒಪ್ಪಿದಂಥ ವಿಚಾರ. ಇದೇನು ಹೊಸ ವಿಚಾರವಲ್ಲ. ಆದುದರಿಂದ, ಇದನ್ನೆಲ್ಲ ಪರಿಶೀಲನೆ ಮಾಡಿ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ನಾನು ಈಗಾಗಲೇ ಹೇಳಿದ್ದೇನೆ. ನೀರಿನ ತೆರಿಗೆಯನ್ನು ಮನ್ನಾ ಮಾಡಲಾಗಿದೆಯೇ ಎಂದು ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಪ್ರಶ್ನೆಯನ್ನು ಕೇಳಲಾಗಿದೆ. ಅದಕ್ಕೆ ಉತ್ತರವನ್ನು ತಯಾರು ಮಾಡಿ ನೀಡಲಾಗಿದೆ. ಆದರೆ, ಮಾನ್ಯ ಬೊಮ್ಮಾಯಿಯವರು ಸಮಗ್ರವಾಗಿ ರಾಜ್ಯಕ್ಕೇ ಸಂಬಂಧಿಸಿದಂತೆ ಮಾಹಿತಿಯನ್ನು ತಿಳಿಸುತ್ತಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ ಪೂರ್ತಿ ಮಾಹಿತಿ ಈಗ ನನ್ನಲ್ಲಿಲ್ಲ. ಆದುದರಿಂದ, ಅದನ್ನೆಲ್ಲ ಪರಿಶೀಲಿಸದೆ ನಾನು ಹೇಗೆ ಆಶ್ವಾಸನೆ ಕೊಡಲಿ. ಬೇಕಾದರೆ, ಅದನ್ನೆಲ್ಲ ಪರಿಶೀಲಿಸಿ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೆಗಳ ಕಾಲಾವಧಿ ಮುಗಿಯಿತು.

QUESTIONS FOR ANSWERS ON THE DAY
(but not taken up)

Posting of Teachers to Primary Schools in Arasikere Constituency.

199 SRI D. B. GANGADHARAPPA (Arasikere)—Will the Minister of State for Primary and Secondary Education be pleased to state:—

(a) the number of primary schools in Arasikere Constituency;

(b) whether it is a fact that many schools are without teachers and they are not provided with sufficient or required number of teachers;

(c) the steps the Government is going to take to provide teachers and when it will be done?

SMT. NAGAMMA KESHAVAMURTHY (Minister of State for Primary and Secondary Education).—

(a) 372.

(b) Yes.

(c) Government is taking steps to recruit primary school teachers through competitive examination.